# ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಕಲಘಟಗಿ

**ಸಿಸಿ ನಂ 211/2024**

**ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 20-01-2026 ರಂದು ಪ್ರಮಾಣ ಮಾಡಿಸಲಾಯಿತು**

| | | | |
|---|---|---|---|
| **ಸಾಕ್ಷಿಯ ಹೆಸರು** | ಃ ಮಂಜುನಾಥ ಹರಮಣ್ಣವರ | **ಪ್ರಾ.ಸಾ ಃ 07** |
| **ತಂದೆ ಃ ಗಂಡ ಹೆಸರು** | ಃ ಪರಸಪ್ಪ | **ಚಾ.ಸಾ ಃ 06** |
| **ವಯಸ್ಸು** | ಃ 39 ವರ್ಷ | |
| **ಉದ್ಯೋಗ** | ಃ ನೌಕರ, ವಿ ಐ ಎನ್ ಬಿ ಸಕ್ಕರೆ ಕಾರ್ಖಾನೆ ಕೋಣನಕೇರೆ, ಶಿಗ್ಗಾಂವ ತಾಲೂಕ | |
| **ವಾಸಸ್ಥಳ** | ಃ ಯಲ್ಲಾಪುರ | |

**ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ. ರವರಿಂದಃ**

ನನಗೆ ಚಾಸಾ-1 ಮತ್ತು 7 ರವರ ಪರಿಚಯ ಇದೆ. ಚಾಸಾ-8 ರಿಂದ 10 ರವರ ಪರಿಚಯ ಇಲ್ಲ. ನನಗೆ ಆರೋಪಿಯ ಪರಿಚಯವಿಲ್ಲ.

ದಿನಾಂಕ 06.10.2022 ರಂದು ನಾನು ಕೆಲಸ ಮುಗಿಸಿಕೊಂಡು ನನ್ನ ಹೆಂಡತಿಯನ್ನು ಕರೆದುಕೊಂಡು ಜುಂಜನಬೈಲ ಗ್ರಾಮಕ್ಕೆ ಮೋಟರ ಸೈಕಲ ಮೇಲೆ ಹೋಗುತ್ತಿದ್ದಾಗ ನನ್ನ ಮುಂದೆ ಎದುರುನಿಂದ ಬರುತ್ತಿದ್ದ ಕಾರ ಟಿ ವಿ ಎಸ್ ಎಕ್ಸಲ್ ವಾಹನಕ್ಕೆ ಡಿಕ್ಕಿ ಪಡಿಸಿದ್ದು ಸದರಿ ವಾಹನಸವಾರ ಮೇಲೆ ಜಿಗಿದು ಕೆಳಗೆ ಬಿದ್ದಿರುತ್ತಾನೆ. ಎಕ್ಸಲ್ ವಾಹನ ಪಕ್ಕಕ್ಕೆ ಹೋಗಿ ಬಿದ್ದಿರುತ್ತದೆ. ನಾನು ಸ್ಥಳಕ್ಕೆ ಹೋಗಿ ನೋಡಿದಾಗ ಚಾಸಾ-1 ರವರ ತಂದೆ ನಾರಾಯಣ ಇದ್ದರು. ನಾರಾಯಣರವರ ತಲೆಗೆ ತೀವ್ರ ತರಹದ ಗಾಯಗಳಾಗಿದ್ದು ಸ್ಥಳದಲ್ಲಿ ಮೃತಪಟ್ಟಿರುತ್ತಾರೆ. ನಾನು ಅಪಘಾತದ ಸುದ್ದಿಯನ್ನು ಚಾಸಾ-1 ಮತ್ತು 7 ರವರೆಗೆ ಕರೆ ಮಾಡಿ ತಿಳಿಸಿರುತ್ತೇನೆ. ನಂತರ ನನ್ನ ಹೆಂಡತಿಯನ್ನು ಕರೆದುಕೊಂಡು ಮನೆಗೆ ಹೋಗಿರುತ್ತೇನೆ. ನಂತರ ನಾರಾಯಣ ಇವರ ಶವವನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗಿರುತ್ತಾರೆ. ಪೋಲೀಸರು ನನ್ನನ್ನು ಕಚೇರಿಗೆ ಕರೆಸಿ ವಿಚಾರಿಸಿದ್ದು ಹೇಳಿಕೆ ನೀಡಿದ್ದೇನೆ. ಅಪಘಾತ ಪಡಿಸಿದ ಕಾರ ನಂಬರ ಗೊತ್ತಿಲ್ಲ. ನನ್ನ ಹೆಂಡತಿ ಗಾಬರಿ ಆಗಿದ್ದರಿಂದ ನಾನು ಸ್ಥಳದಲ್ಲಿ ಬೇರೆ ಏನನ್ನು ನೋಡಿಲ್ಲ. ಕಾರ ಚಾಲಕನ ಬಗ್ಗೆ ನನಗೆ ಗೊತ್ತಿಲ್ಲ. ಸ್ಥಳದಲ್ಲಿ ನಾನು ಆತನನ್ನು ನೋಡಿಲ್ಲ.

***(ಮಾನ್ಯ ಸ.ಸ.ಅ ಯವರ ವಿನಂತಿ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ,*** *ಪಾಟೀ ಸವಾಲಿಗೆ ಅನುಮತಿಸಿದೆ)*

**ಪಾಟೀ ಸವಾಲುಃ ಮಾನ್ಯ ಸ.ಸ.ಅ. ರವರಿಂದಃ**

ದಿನಾಂಕ 06.10.2022 ರಂದು ಸಾಯಂಕಾಲ 6-00 ಗಂಟೆಗೆ ನಾನು ಮೋಟರ ಸೈಕಲ ಮೇಲೆ ಹೋಗುವಾಗ ಮಾರುತಿ ಸ್ವಿಫ್ಟ ಕಾರ ನಂ ಕೆಎ 42/ ಎ 5975 ನೇದ್ದು ಬಂದಿದ್ದು ಅದರ ಚಾಲಕ ನನ್ನ ಮುಂದೆ ಹೋಗುತ್ತಿದ್ದ ಟಿ ವಿ ಎಸ್ ಎಕ್ಸಲ್ ನಂ ಕೆಎ 25/ ಇ ವಾಯ್ 7616 ನೇದ್ದಕ್ಕೆ ಡಿಕ್ಕಿ ಪಡಿಸಿ ಅಪಘಾತ ಪಡಿಸಿರುತ್ತಾನೆ ಅಂದರೆ ನಿಜ. ಕಾರ ಚಾಲಕ ಮುಂದೆ ಹೋಗುವ ಭರದಲ್ಲಿ ಓವರ್ಟೇಕ ಮಾಡಿ ಅಪಘಾತ ಪಡಿಸಿದ್ದಾನೆ ಅಂದರೆ ನಿಜ. ಕಾರ ಚಾಲಕ ವಾಹನವನ್ನು ಸ್ಥಳದಲ್ಲಿ ಬಿಟ್ಟು ಓಡಿ ಹೋದ ಅಂದರೆ ನಿಜ.

ಕಾರಿನಲ್ಲಿ ಚಾಲಕನ್ನು ಹೊರತು ಪಡಿಸಿ 3 ಜನ ಇದ್ದರು ಅಂದರೆ ನಿಜ. ದಿನಾಂಕ 10.10.2022 ರಂದು ಪೋಲೀಸರು ನನ್ನನ್ನು ಠಾಣೆಗೆ ಕರೆಸಿದ್ದು ಆ ಸಮಯದಲ್ಲಿ ಅಪಘಾತ ಪಡಿಸಿದ್ದ ಕಾರ ಚಾಲಕ ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿ ಉಮೇಶ ಕಳ್ಳಿಮನಿ ಇವರನ್ನು ತೋರಿಸಿದ್ದು ಆತನೆ ಕಾರ ಚಾಲಕ ಎಂದು ನಾನು ನೋಡಿ ಗುರುತಿಸಿದ್ದೇನೆ ಅಂದರೆ ಸರಿಯಲ್ಲ. ಈ ಬಗ್ಗೆ ಪೋಲೀಸರ ಮುಂದೆ ನಿಪಿ-11 ರಂತೆ ಪುರವಣಿ ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ. ಕಾರಿನಲ್ಲಿ ಸದರಿ ದಿನ ಚಾಸಾ-8 ರಿಂದ 10 ರವರು ಇದ್ದರು ಅಂದರೆ ಸರಿಯಲ್ಲ. ಆರೋಪಿ ಹಾಗೂ ಚಾಸಾ-8 ರಿಂದ 10 ರವರನ್ನು ನೋಡಿ ಗುರುತಿಸಿದ್ದರೂ ಕೂಡಾ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್ ವಾಯ ಆರ್ ವಕೀಲರಿಂದಃ**

ಘಟನೆ ಆದಾಗ ಸಾಯಂಕಾಲ 6 ಗಂಟೆ ಆಗಿತ್ತು. ಕಾರ ನಂಬರ ಹಾಗೂ ಟಿ ವಿ ಎಸ್ ಎಕ್ಸಲ ವಾಹನದ ನಂಬರ ನನಗೆ ಗೊತ್ತಿಲ್ಲ. ಮೃತ ನಾರಾಯಣ ಹಾಗೂ ಚಾಸಾ-1 ನಮ್ಮ ದೂರದ ಸಂಬಂಧಿಕರು ಅಂದರೆ ನಿಜ. ಚಾಸಾ-1 ನನ್ನ ಸ್ನೇಹಿತ. ಚಾಸಾ-1 ರವರಿಗೆ ಕರೆ ಮಾಡಿ ಹೇಳಿದ್ದನ್ನು ಹೊರತು ಪಡಿಸಿ ನನಗೆ ಬೇರೆ ವಿಷಯ ಗೊತ್ತಿಲ್ಲ. ನಾನು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿಲ್ಲ ಅಂದರೆ ಸರಿಯಲ್ಲ. ನಾನು ಸ್ಥಳದಿಂದ 2 ರಿಂದ 3 ನಿಮಿಷ ಇದ್ದೆನು. ಚಾಸಾ-1 ನನ್ನ ಸ್ನೇಹಿತ ಆಗಿರುವುದರಿಂದ ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೆ ಸರಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**